

ಹಂಪಿಯಲ್ಲಿ ಎಲ್ಲಿಂದಲೋ ಬಂದವರು

# ಎಲ್ಲಿಯೂ ನಿಲ್ಲದವರು!

ಇವರು ಕುವೆಂಪು ಅವರ 'ವಿಶ್ವಮಾನವ' ಆಶಯದವರು. ಯಾವ ದೇಶದಲ್ಲೂ ಆರು ತಿಂಗಳಿಗಿಂತ ಹೆಚ್ಚು ಉಳಿಯಬಾರದು ಎಂದುಕೊಂಡವರು. ಅಪ್ಪ– ಅಮ್ಮ– ಮಕ್ಕಳ ಈ ಸಂಸಾರದ ದೇಶಾಂತರ ವಾಸದ ಕಥೆ ಕುತೂಹಲ ಕೆರಳಿಸುವಂತಿದೆ.

★ ಚಿತ್ರ- ಲೇಖನ: ಅಶೋಕ ಉಚ್ಚಂಗಿ

ಇವರು ಎರಿಕ್ ಮತ್ತು ಮೈಕಾ ಸಿನ್‌ಕ್ಲೇರ್ ದಂಪತಿ. ಜೂನ್ 2015 ರಲ್ಲಿ ಅಮೆರಿಕಾದ ಕ್ಯಾಲಿಫೋರ್ನಿಯದಲ್ಲಿನ ತಮ್ಮ ಮನೆ, ಕಾರು ಇತರ ವಸ್ತುಗಳನ್ನೆಲ್ಲಾ ಮಾರಿ ದೇಶಾಂತರ ಹೊರಟವರು. ಅಲ್ಲಿಂದ ಕೋಸ್ಟರಿಕಾ, ನಿಕರಾಗುವಾ, ಕ್ಯೂಬಾ ಮತ್ತು ಪೆರು ದೇಶಗಳಲ್ಲಿ ಸಂಚರಿಸಿ ಇದೀಗ ಭಾರತಕ್ಕೆ ಬಂದಿದ್ದಾರೆ. ಭಾರತದಲ್ಲಿ ಸುಮಾರು 6 ತಿಂಗಳು ವಾಸ್ತವ್ಯ ಹೂಡಲು ಇವರು ಆಯ್ದುಕೊಂಡದ್ದು ಮೈಸೂರು ನಗರವನ್ನು.

ಇವರದ್ದು ಅನಿಕೇತನರಾಗುವ ಮನಸ್ಸು. ಎಲ್ಲಿಯೂ ನಿಲ್ಲದೇ, ಕೊನೆಯನೆಂದು ಮುಟ್ಟದೇ, ದೇಶ ದೇಶಗಳನ್ನು ದಾಟಿ ಅಲ್ಲಿನ ಜನಜೀವನ, ಆಚಾರ, ವಿಚಾರ, ಸಂಸ್ಕೃತಿಗಳ ಪರಿಚಯ ಮಾಡಿಕೊಳ್ಳುತ್ತ ಸ್ಥಳೀಯರೊಂದಿಗೆ ಬೆರೆಯುತ್ತಾ ವಿಶ್ವಮಾನವರಾಗುವ ಹಂಬಲ ಉಳ್ಳವರು. ಈ ದಂಪತಿಗಳಷ್ಟೇ ಅಲ್ಲ, ಇವರ ಮೂವರು ಮಕ್ಕಳಾದ ಐಸಾಕ್, ಸಶಾ ಮತ್ತು ಸೈಲಸ್ ಸಹ ಈ ನಿಲ್ಲದ ಪಯಣದಲ್ಲಿ ಜತೆಗಿದ್ದಾರೆ. ಎಲ್ಲಿಯೂ ನಿಲ್ಲದ ಈ ವಿಶ್ವಪರ್ಯಟಕರು ಈಗ ಮೈಸೂರಿಗೆ ಬಂದಿದ್ದಾರೆ.

'ಆರಾಮದಾಯಕ ಪ್ರವಾಸ' ಎಂಬುದು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಪ್ರವಾಸವೆಂದರೆ ಸಾಮಾನ್ಯವಾಗಿ ಒಂದೆರಡು ದಿನದ ಮಟ್ಟಿಗೆ ಅಥವಾ ಹತ್ತು – ಹದಿನೈದು ದಿನಗಳಲ್ಲಿ ವಿವಿಧ ತಾಣಗಳನ್ನು ಸಂದರ್ಶಿಸಿ ಬರುವ ಪರಿಪಾಠವಿದೆ. 'ಸ್ಲೋ ಟೂರಿಸಂ' ಎಂದರೆ ಯಾವುದಾದರೂ ಪ್ರವಾಸಿ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿಯೇ ತಿಂಗಳುಗಟ್ಟಲೆ ಸುತ್ತಾಡುವ ಪರಿಕಲ್ಪನೆ. ಲಾಡ್ಜ್‌ನಲ್ಲೋ, ರೆಸಾರ್ಟಿನಲ್ಲೋ ಉಳಿಯದೆ, ಜನವಸತಿ ಪ್ರದೇಶಗಳಲ್ಲಿ ಬಾಡಿಗೆ ಮನೆ ಮಾಡಿಕೊಂಡು, ಜನಸಾಮಾನ್ಯರೊಡನೆ

ನಾಟಕವೊಂದರಲ್ಲಿ...

